ಆಕ್ಟ್ರಾಯ್ ಪದ್ಧತಿಯನ್ನು ಪುನಃ ಜಾರಿಗೆ ತರುವುದರ ಬಗ್ಗೆ

1081 (1235) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಕ್ಟ್ರಾಯ್ ಪದ್ಧತಿಯನ್ನು ನಿಲ್ಲಿಸಿದ್ದರಿಂದ ಮಹಾನಗರಪಾಲಿಕೆ ಹಾಗೂ ಪುರಸಭೆಗಳ ಆದಾಯ ಕಡಿಮೆಯಾಗಿರುವ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ ಆಕ್ಟ್ರಾಯ್ ಪದ್ಧತಿಯನ್ನು ಜಾರಿಗೆ ತರಲಾಗುವುದೇ?

ಇ) ಆಕ್ಟ್ರಾಯ್ ಪದ್ಧತಿಯನ್ನು ರದ್ದು ಪಡಿಸಿದ್ದರಿಂದ ಮಹಾನಗರ ಪಾಲಿಕೆಗಳು ಹಾಗೂ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಶೋಚನೀಯವಾದ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ ಮಹಾನಗರಪಾಲಿಕೆ ಹಾಗೂ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸರ್ಕಾರ ಯಾವ ಆದ್ಯತೆ ಕ್ರಮ ಕೈಗೊಂಡಿದೆ ?

ಉ) ಆಕ್ಟ್ರಾಯ್ ಪದ್ಧತಿಯಿಂದ ಬೆಳಗಾಂ ಮಹಾನಗರಪಾಲಿಕೆಗೆ ಎಷ್ಟು ವಾರ್ಷಿಕ ಉತ್ಪನ್ನ ಬರುತ್ತಿತ್ತು (ಆಕ್ಟ್ರಾಯ್ ಪದ್ಧತಿ ರದ್ದು ಪಡಿಸಿದ ಕೊನೆಯ ವರ್ಷದ ಆದಾಯವನ್ನು ತಿಳಿಸುವುದು)

ಶ್ರೀ ವಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ಇಲ್ಲ.

ಆ) ಆಕ್ಟ್ರಾಯ್ ಪದ್ಧತಿಯನ್ನು ಪುನರ್‌ಜಾರಿ ಗೊಳಿಸುವ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮುಂದಿಲ್ಲ.

ಇ) ಇಲ್ಲ. ರಾಜ್ಯ ಹಣಕಾಸು ಆಯೋಗದ ಶಿಫಾರಸಿನ ಅನುಸಾರ ಮಹಾನಗರಪಾಲಿಕೆಗಳು ಹಾಗೂ ಪುರಸಭೆಗಳು ಈ ಹಿಂದೆ ಪಡೆಯುತ್ತಿದ್ದ ಆದಾಯ ಕ್ಕಿಂತ ಉತ್ತಮ ಅನುದಾನವನ್ನು ಎಸ್‌ಎಫ್‌ಸಿ ಯಿಂದ ಪಡೆಯುತ್ತಿವೆ.

ಈ) ಉದ್ಭವಿಸುವುದಿಲ್ಲ.

ಉ) ಕರ್ನಾಟಕದಲ್ಲಿ ದಿನಾಂಕ 31-3-1979 ರಿಂದ ಆಕ್ಟ್ರಾಯ್ ಪದ್ಧತಿಯನ್ನು ರದ್ದುಗೊಳಿಸಲಾಗಿದೆ. ಬೆಳಗಾವಿ ಮಹಾನಗರಪಾಲಿಕೆಗೆ 1978-79ರಲ್ಲಿ ಆಕ್ಟ್ರಾಯ್ ದಿಂದ ಬಂದ ಒಟ್ಟು ವಾರ್ಷಿಕ ಉತ್ಪನ್ನ ರೂ. 1,02,24,401.00 ಆಗಿತ್ತು.

ಕೈಮಗ್ಗದ ಉದ್ಯೋಗದ ಮೇಲೆ ಆಗುತ್ತಿರುವ ಹಾನಿ

1083 (1256) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕೈಮಗ್ಗ ನಿಗಮದವರು ತಯಾರಿಸಿದ ಎಷ್ಟು ಮೊತ್ತದ ಅರಿವೆಗಳು ಸಂಗ್ರಹವಾಗಿರುವುವು ಹಾಗೂ ಎಷ್ಟು ದಿನಗಳಿಂದ ಸಂಗ್ರಹವಾಗಿರುವುವು?

ಆ) ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಕೈಮಗ್ಗ ಬಟ್ಟೆಗಳನ್ನು ಉಪಯೋಗಿಸದೆ ಇರುವುದರಿಂದ ಆ ಉದ್ಯೋಗದ ಮೇಲೆ ಹಾನಿಯಾಗುತ್ತಿರುವ ಸಂಗತಿ ನಿಜವೇ?

ಇ) ಕೈಮಗ್ಗದ ಅಧಿಕಾರಿಗಳ ಮತ್ತು ಶಿಕ್ಷಣ ಅಧಿಕಾರಿಗಳ ನಡುವೆ ಸಾಮರಸ್ಯ ಇಲ್ಲದೆ ಇರುವುದರಿಂದ ರಾಜ್ಯದ ಕೈಮಗ್ಗದ ಅರಿವೆಗಳು ಹಾಗೇ ಸಂಗ್ರಹವಾಗಿರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ ಕೂಡಲೇ ಶಿಕ್ಷಣ ಇಲಾಖೆಯವರು ಕೈಮಗ್ಗದ ಬಟ್ಟೆಗಳನ್ನು ಖರೀದಿಸಿ, ನೇಕಾರರಿಗೆ ಉದ್ಯೋಗಾವಕಾಶ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಬೇಕಾದ ಬಟ್ಟೆ ಅವಶ್ಯಕತೆಯನ್ನು ನೀಗಿಸಿಕೊಳ್ಳಲು ಕೈ ಮಗ್ಗ ಅಭಿವೃದ್ಧಿ ನಿಗಮವು ಕಳೆದ ಆರು ತಿಂಗಳ ಅವಧಿಯಲ್ಲಿ ಸುಮಾರು ರೂ. 23 ಕೋಟಿ ಮೌಲ್ಯದ ಬಟ್ಟೆ ಉತ್ಪಾದಿಸಿದೆ.

ಆ) ವಿದ್ಯಾ ವಿಕಾಸ ಯೋಜನೆಯಡಿ ಹೆಚ್ಚಿನ ಪಾಲಿನ ಸಮವಸ್ತ್ರ ಬಟ್ಟೆ ಸರಬರಾಜು ಮಾಡುವ ಹೊಣೆಯನ್ನು ಶಿಕ್ಷಣ ಇಲಾಖೆಯು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ವಹಿಸುವ ಮೂಲಕ ಕೈಮಗ್ಗದ ಬಟ್ಟೆಯನ್ನು ಉಪಯೋಗಿಸುತ್ತಿದೆ.

ಇ) ನಿಜವಲ್ಲ.

ಈ) ವಿದ್ಯಾ ವಿಕಾಸ ಯೋಜನೆಯಡಿ ಬರುವ ಶೈಕ್ಷಣಿಕ ವರ್ಷದ ಸಮವಸ್ತ್ರದ ಬಟ್ಟೆ ಅವಶ್ಯಕತೆಯಲ್ಲಿ ಹೆಚ್ಚಿನ ಪ್ರಮಾಣದ ಅವಶ್ಯಕತೆಗೆ ಬೇಡಿಕೆ ಪಟ್ಟಿಯನ್ನು ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಲು ಶಿಕ್ಷಣ ಇಲಾಖೆಯು ಕ್ರಮ ತೆಗೆದುಕೊಳ್ಳತ್ತಲಿದೆ.

ತಾಲ್ಲೂಕು ಸ್ಥಳಗಳಲ್ಲಿ ಶೆಡ್‌ಗಳನ್ನು ಕಟ್ಟುವುದು

1084 (1258) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಾಲ್ಲೂಕು ಸ್ಥಳಗಳಲ್ಲಿ ಚಿಕ್ಕ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಶೆಡ್‌ಗಳನ್ನು ಕಟ್ಟಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಆ) ಹಾಗಿದ್ದಲ್ಲಿ ಕಳೆದ 2 ವರ್ಷಗಳಲ್ಲಿ ತಾಲ್ಲೂಕು ಸ್ಥಳಗಳಲ್ಲಿ ಶೆಡ್‌ಗಳನ್ನು ಕಟ್ಟುವುದಾಗಲೀ ಅಥವಾ ಪ್ರೋತ್ಸಾಹ ಕೊಡಲಾಗಿದೆಯೇ: (ಜಿಲ್ಲಾವಾರು ವಿವರ ನೀಡುವುದು)

ಇ) ಕಳೆದ 3 ವರ್ಷಗಳಲ್ಲಿ ಬೆಳಗಾಂವ ಜಿಲ್ಲೆಯಲ್ಲಿ ಇಂತಹ ಎಷ್ಟು ಶೆಡ್‌ಗಳನ್ನು ಕಟ್ಟಲಾಗಿದೆ? ಹಾಗೂ ಎಷ್ಟು ರಿಯಾಯಿತಿ ನೀಡಲಾಗಿದೆ? ಮತ್ತು ಹೆಚ್ಚಿನ ಪ್ರೋತ್ಸಾಹ ನೀಡಲಾಗಿದೆಯೇ? (ತಾಲ್ಲೂಕುವಾರು ವಿವರ ನೀಡುವುದು)

ಈ) ಬೆಳಗಾಂವ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಹೊಸ ಚಿಕ್ಕ ಉದ್ಯಮಿಗಳು ಎಷ್ಟು ಬಂದಿರುವುವು? ಅವುಗಳಲ್ಲಿ ಎಷ್ಟು ಉದ್ಯಮಿಗಳು ನೊಂದಾಯಿಸಿದ ನಂತರ ಪ್ರಾರಂಭವಾಗಿರುವುವು?